ರಾಜ್ಯದಲ್ಲಿರುವ ಜಿಲ್ಲಾ ಸಹಕಾರಿ ಬ್ಯಾಂಕುಗಳ ಆರ್ಥಿಕ ಸ್ಥಿತಿ ಸುಧಾರಿಸುವುದು

920 (1254) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿ ಎಷ್ಟು ಜಿಲ್ಲಾ ಸಹಕಾರಿ ಬ್ಯಾಂಕುಗಳು ಇರುವುವು. ಹಾಗೂ ಯಾವ ಯಾವ ಜಿಲ್ಲೆಗಳಲ್ಲಿ ಇನ್ನೂವರೆಗೂ ಜಿಲ್ಲಾ ಸಹಕಾರಿ ಬ್ಯಾಂಕ್‌ಗಳು ಇರುವುದಿಲ್ಲ. (ಪೂರ್ಣವಾದ ವಿವರ ನೀಡುವುದು)

2) ಇವುಗಳಲ್ಲಿ ಕಳೆದ 2 ವರ್ಷಗಳಲ್ಲಿ ಎಷ್ಟು ಜಿಲ್ಲಾ ಸಹಕಾರಿ ಬ್ಯಾಂಕುಗಳು ಲಾಭದಲ್ಲಿವೆ?

3) ಹಾಗಿದ್ದಲ್ಲಿ ನಷ್ಟದಲ್ಲಿರುವ ಜಿಲ್ಲಾ ಸಹಕಾರಿ ಬ್ಯಾಂಕ್‌ಗಳ ಸುಧಾರಣೆಗಾಗಿ ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ.

4) ಜಿಲ್ಲಾ ಸಹಕಾರಿ ಬ್ಯಾಂಕುಗಳು ನಷ್ಟದಲ್ಲಿರುವ ಕಾರಣಗಳೇನು?

5) ರಾಜ್ಯದಲ್ಲಿ ಹೊಸದಾಗಿ ನಿರ್ಮಾಣವಾಗಿರುವ ಜಿಲ್ಲೆಗಳಲ್ಲಿ ಜಿಲ್ಲಾ ಸಹಕಾರಿ ಬ್ಯಾಂಕ್‌ಗಳನ್ನು ತೆರೆಯಲು ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಂಡಿದೆ?

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :

1) ರಾಜ್ಯದಲ್ಲಿ 19 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಇರುತ್ತವೆ. ದಾವಣಗೆರೆ, ಗದಗ್, ಹಾವೇರಿ, ಚಾಮರಾಜನಗರ, ಕೊಪ್ಪಳ, ಬಾಗಲಕೊಟೆ, ಮತ್ತು ಉಡುಪಿ ಜಿಲ್ಲೆಗಳಲ್ಲಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಇರುವುದಿಲ್ಲ.

2)

1998-99	1999-2000
17	16

3) ನಷ್ಟದಲ್ಲಿರುವ ಜಿಲ್ಲಾ ಸಹಕಾರ ಬ್ಯಾಂಕುಗಳ ಸುಧಾರಣೆಗಾಗಿ ಅಭಿವೃದ್ಧಿ ಕ್ರಿಯಾ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಬ್ಯಾಂಕಿಂಗ್ ವ್ಯವಹಾರವನ್ನು ಹೆಚ್ಚಿಸಲು ಹಾಗೂ ಕಾಸ್ಟ್ ಆಫ್ ಫಂಡನ್ನು ತಗ್ಗಿಸಲು ಸೂಚನೆಗಳನ್ನು ನೀಡಲಾಗಿದೆ. ಸಾಲ ವಸೂಲಾತಿಯನ್ನು ಉತ್ತಮ ಪಡಿಸಲು ಸೂಚಿಸಲಾಗಿದೆ. ಸಂಬಂಧಿಸಿದ ಬ್ಯಾಂಕ್‌ಗಳ ಸಭೆಗಳನ್ನು ಏರ್ಪಡಿಸಿ ಮಾರ್ಗದರ್ಶನ ನೀಡಲಾಗಿದೆ. ನಷ್ಟದಲ್ಲಿದ್ದ ಕೋಲಾರ ಹಾಸನ ಜಿಲ್ಲಾ ಬ್ಯಾಂಕುಗಳಿಗೆ ತಲಾ ರೂ. 50.00 ಲಕ್ಷದಂತೆ ಷೇರು ಬಂಡವಾಳವನ್ನು ಕಳೆದ ಸಾಲಿನಲ್ಲಿ ಮಂಜೂರು ಮಾಡಲಾಗಿದೆ. ಹಾಗೂ ಗುಲ್ಬರ್ಗಾ ರಾಯಚೂರು ಜಿಲ್ಲಾ ಬ್ಯಾಂಕುಗಳಿಗೆ ಸಾಲದ ಅಂತರವನ್ನು ಹೋಗಲಾಡಿಸಲು ಕ್ರಮವಾಗಿ ರೂ. 74.00 ಲಕ್ಷ ಮತ್ತು ರೂ. 54.45 ಲಕ್ಷವನ್ನು ನೀಡಲಾಗಿದೆ. ಗುಲ್ಬರ್ಗಾ ಜಿಲ್ಲಾ ಬ್ಯಾಂಕಿನಿಂದ ಸರ್ಕಾರಕ್ಕೆ ಬರಬೇಕಾಗಿದ್ದ ರೂ. 104.00 ಲಕ್ಷ ಆಸಲು ಮತ್ತು ಬಡ್ಡಿಯನ್ನು ಷೇರು ಬಂಡವಾಳವನ್ನಾಗಿ ಪರಿವರ್ತಿಸಲಾಗಿದೆ.

4) ಅಸಮದಾನಕರವಾದ ಸಾಲ ವಸೂಲಾತಿ, ಕಡಿಮೆ ಬ್ಯಾಂಕಿಂಗ್ ವ್ಯವಹಾರ, ಸಾಲದ ಅಂತರ, ಸಲಾ ಮಂಜೂರಾತಿಯಲ್ಲಿ ಆಶಿಸ್ತು ಇತ್ಯಾದಿ ನಷ್ಟಕ್ಕೆ ಮುಖ್ಯ ಕಾರಣಗಳಾಗಿರುತ್ತವೆ.

5) ಹೊಸದಾಗಿ ರಚಿತವಾದ ಜಿಲ್ಲೆಗಳಲ್ಲಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳನ್ನು ಸ್ಥಾಪಿಸುವ ಕುರಿತು ಆರ್ಥಿಕ ಸಾಧ್ಯತೆಯ ಬಗ್ಗೆ ಅಧ್ಯಯನ ನಡೆಸಲು ನಬಾರ್ಡ್‌ನ ನಿವೃತ್ತ ಸಲಹೆಗಾರರಾದ ಶ್ರೀ ಆರ್. ಸುಂದರ ವರದನ್ ಇವರನ್ನು ನೇಮಿಸಲಾಗಿತ್ತು. ಆರ್ಥಿಕ ಸಾಧ್ಯತಾ ವರದಿಯನ್ನು ಆಧರಿಸಿ ಹಾಲ್ ಇರುವ ಸಂಬಂಧಿಸಿದ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳನ್ನು ವಿಭಜಿಸಿ ದಾವಣಗೆರೆ, ಗದಗ್, ಹಾವೇರಿ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಹೊಸ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳನ್ನು ಸ್ಥಾಪಿಸಲು ಆರ್. ಬಿ. ಐ. ನ ಅನುಮತಿ ಕೋರಿ ಪ್ರಸ್ತಾವನೆಯನ್ನು ನಬಾರ್ಡ್ ಮೂಲಕ ದಿನಾಂಕ: 5-9-98 ರಂದು ಸಲ್ಲಿಸಲಾಗಿರುತ್ತದೆ. ಉಡುಪಿ ಜಿಲ್ಲೆಯಲ್ಲಿ ಹೊಸ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕನ್ನು ಸ್ಥಾಪಿಸಲು ದಿನಾಂಕ 27-9-99ರಲ್ಲೆ ನಬಾರ್ಡ್‌ಗೆ ಪ್ರಸ್ತಾವೆ ಸಲ್ಲಿಸಲಾಗಿತ್ತು.

ಚಾಮರಾಜನಗರ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಆರ್ಥಿಕ ಸಾಧ್ಯತೆ ಇಲ್ಲದೇ ಇರುವ ಕಾರಣ ಪ್ರಸ್ತಾವನೆಯನ್ನು ಆರ್. ಬಿ. ಯಗೆ ಸಲ್ಲಿಸಿರುವುದಿಲ್ಲ.

ದಿನಾಂಕ 7-4-2000ರ ಪತ್ರದ ಮುಖೇನ ದಾವಣಗೆರೆ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಮಾತ್ರ ಹೊಸ ಜಿಲ್ಲಾ ಬ್ಯಾಂಕ್‌ಗಳನ್ನು ಸ್ಥಾಪಿಸಲು ಆರ್. ಬಿ. ಐ. ಅನುಮತಿ ನೀಡಿರುವುದನ್ನು ನಬಾರ್ಡ್ ತಿಳಿಸಿರುತ್ತದೆ. ಹಾಲಿ ಇರುವ ಶಿವಮೊಗ್ಗ, ಚಿತ್ರದುರ್ಗ, ಬಳ್ಳಾರಿ ಜಿಲ್ಲಾ ಬ್ಯಾಂಕುಗಳನ್ನು ವಿಭಜಿಸಿ ದಾವಣಗೆರೆ ಜಿಲ್ಲೆಯಲ್ಲಿ ಹೊಸ ಜಿಲ್ಲಾ ಬ್ಯಾಂಕ್ ಸ್ಥಾಪನೆಗೆ ಸಂಬಂಧಿಸಿದಂತೆ ಸಹಕಾರ ಸಂಘಗಳ ಕಾಯ್ದೆ ಕಲಂ 14ರ ಪ್ರಕಾರ ಸಂಯುಕ್ತ ನಿಬಂಧಕರು (ಪತ್ತು) ಇವರು ಆದೇಶ ಹೊರಡಿಸಿರುತ್ತಾರೆ. ಬಾಗಲಕೋಟೆ ಜಿಲ್ಲೆಯಲ್ಲಿ ಹೊಸ ಜಿಲ್ಲಾ ಬ್ಯಾಂಕ್ ಸ್ಥಾಪಿಸಿರುವುದಕ್ಕೆ ಸಂಬಂಧಿಸಿದಂತೆ ಹಾಲಿ ಇರುವ ಬಿಜಾಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ಆಸ್ತಿ ಜವಾಬ್ದಾರಿ ವಿಭಜನೆಗೆ ಸರ್ವ ಸದಸ್ಯರ ಸಭೆಯ ಒಪ್ಪಿಗೆಯು ಅಗತ್ಯವಿರುವುದರಿಂದ ವಿಶೇಷ ಸರ್ವ ಸದಸ್ಯರ ಸಭೆಯನ್ನು ಕರೆಯುವಂತೆ ಸಹಕಾರ ಸಂಘಗಳ ಕಾಯ್ದೆ ಕಲಂ30 'ಬಿ' ಪ್ರಕಾರ ಸರ್ಕಾರ ಬ್ಯಾಂಕಿಗೆ ದಿನಾಂಕ:2-2-2001 ರಂದು ನಿರ್ದೇಶನ ನೀಡಿದೆ.

ರಾಜ್ಯದಲ್ಲಿ ಆಶ್ರಯ ಮನೆಗಳ ಆಯ್ಕೆ ಪಟ್ಟಿಯ ತಡೆಹಿಡಿದಿರುವುದು

921 (1336) ಶ್ರೀ ಕೃಷ್ಣಮೂರ್ತಿ ಎ. ಆರ್. (ಸಂತೇಮರನಹಳ್ಳಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಯಾವ ಕ್ಷೇತ್ರದ ಆಶ್ರಯ ಮನೆ ಆಯ್ಕೆ ಪಟ್ಟಿಗಳನ್ನು ಮಂಜೂರಾತಿ ನೀಡದೇ ತಡೆಹಿಡಿಯಲಾಗಿದೆ; ಯಾವ ಯಾವ ಕ್ಷೇತ್ರಗಳ ಆಯ್ಕೆ ಪಟ್ಟಿಯನ್ನು ತಡೆಹಿಡಿಯಲಾಗಿದೆ; (ವಿವರ ನೀಡುವುದು)

ಆ) ತಡೆಹಿಡಿಯಲಾಗಿರುವ ಆಯ್ಕೆ ಪಟ್ಟಿಯನ್ನು ತೆರವುಗೊಳಿಸಿ ಮಂಜೂರಾತಿ ನೀಡಲಾಗಿರುವ ಆಯ್ಕೆ ಪಟ್ಟಿಗಳು ಎಷ್ಟು; ಯಾವ ಕಾರಣದಿಂದ ತಡೆಯಾಗಿರುವ ಆಯ್ಕೆ ಪಟ್ಟಿಯನ್ನು ತೆರೆವು ಗೊಳಿಸಲಾಗಿರುತ್ತದೆ;

ಇ) ಆಯ್ಕೆ ಪಟ್ಟಿಯನ್ನು ತಡೆಹಿಡಿಯಲು ಯಾವ ಸರ್ಕಾರಿ ಮಾನದಂಡವನ್ನು ಅನುಸರಿಸಲಾಗಿದೆ?